ಪ್ರ-330 - 106

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ತೇಜಸ್ವಿನಿ ಗೌಡ, ಇವರು ನಿಯಮ-330 ಮೇರೆಗೆ ಮಂಡಿಸಿರುವ ಪ್ರಶ್ನೆಗೆ ಉತ್ತರ.

**ಪ್ರಶ್ನೆ:**

ಭಾರತ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ನಂತರ 263 ವರ್ಷಗಳ ಕಾಲ ಸುದೀರ್ಘ ಆಳ್ವಿಕೆ ಮಾಡಿದ ಸಾಮ್ರಾಜ್ಯ ಕೆಳದಿ. 'ಕೆಳದಿ ಸಾಮ್ರಾಜ್ಯ' 1498 ರಲ್ಲಿ ಚೌಡಪ್ಪಗೌಡ ನಾಯಕರಿಂದ ಆರಂಭವಾಗಿ 1763 ರವರೆಗೆ ಕೊನೆಯ ರಾಣಿ ವೀರಮ್ಮಾಜಿ ಮತ್ತು ಮುಮ್ಮಡಿ ಸೋಮಶೇಖರ ನಾಯಕವರೆಗೆ 18 ಅರಸು-ಅರಸಿಯರು ಆಳ್ವಿಕೆ ನಡೆಸಿದ್ದಾರೆ.

ಕೆಳದಿ, ಇಕ್ಕೇರಿ ಬಿದನೂರು ಮತ್ತು ಭುವನಗಿರಿದುರ್ಗ ಅಥವಾ ಕವಲೇದುರ್ಗ ಎಂಬ 4 ರಾಜಧಾನಿಗಳ ಮೂಲಕ ಆಳಿದ ಈ ಸಾಮ್ರಾಜ್ಯದಲ್ಲಿ ಶಿವಪ್ಪ ನಾಯಕರು ಹಾಗೂ ವೀರರಾಣಿ ಕೆಳದಿ ಚೆನ್ನಮ್ಮಾಜಿ 25 ವರ್ಷ ಆಳಿದ ರಾಣಿ ಅನೇಕ ಕೊಡುಗೆಗಳನ್ನು ವಿಶೇಷ ಕೋಟೆ ಕೊತ್ತಲ ಅರಮನೆ, ದೇವಸ್ಥಾನ, ಬಸದಿ, ಚರ್ಚ್, ಮಸೀದಿ ಹೀಗೆ ಸಾಮರಸ್ಯದ ಆಳ್ವಿಕೆ ನಡೆಸಿ ಚರಿತ್ರಾರ್ಹರಾಗಿದ್ದಾರೆ. ಶಿವಾಜಿಯ ಪುತ್ರ ರಾಜಾರಾಮರನ್ನು ಕೊಲ್ಲಲು ಕ್ರೂರಿ ದೊರೆ ಔರಂಬಜೇಬ ಯತ್ನಿಸಿದಾಗ ರಾಜರಾಮರಿಗೆ ಅರಮನೆ ಕೊಪ್ಪದಲ್ಲಿ ಆಶ್ರಯ ನೀಡಿ ರಕ್ಷಿಸಿದ ವೀರ ರಾಣಿ ಚೆನ್ನಮ್ಮಾಜಿ. ಆದರೆ ಇವರ ನಿಜವಾದ ಚರಿತ್ರೆಯು ಇತಿಹಾಸದಲ್ಲಿ ದಾಖಲಾಗದೆ ಅನ್ಯಾಯವಾಗಿದೆ. ಹಾಗೆಯೇ ಕೊನೆಯ ವೀರರಾಣಿ (ಹೈದರ್ ಅಲಿ ವಿರುದ್ಧ 21 ದಿನ ಸ್ವತಃ ಯುದ್ಧ ಗೈದವರು) ವೀರಮ್ಮಾಜಿಯವರ ವ್ಯಕ್ತಿತ್ವವನ್ನು ಚಾರಿತ್ರ್ಯ ವಧೆ ಮಾಡಲಾಗಿದೆ. ಮತ್ತು ನಮ್ಮ ಹೆಮ್ಮೆಯ ಕೆಳದಿ ಅರಸ-ಅರಸಿಯರ ಆಡಳಿತದ ಬಗ್ಗೆ ವಸ್ತು ನಿಷ್ಠವಾದ ಸಾಹಿತ್ಯ-ಚರಿತ್ರೆ ರಚನೆಯ ಅವಶ್ಯಕತೆ ಇರುವುದರಿಂದ ಈ ಕುರಿತು ಚರ್ಚಿಸಲು ಅವಕಾಶಕ್ಕಾಗಿ ಕೋರುತ್ತೇನೆ.

**ಉತ್ತರ:**

ಕೆಳದಿ ಸಾಮ್ರಾಜ್ಯವನ್ನು ಸುದೀರ್ಘವಾಗಿ ಆಳ್ವಿಕೆ ಮಾಡಿದ ರಾಜಮನೆತನಗಳ ಕುರಿತಂತೆ 'ಕೆಳದಿ ಕಾಲದ ಐತಿಹಾಸಿಕ ದಾಖಲೆಗಳು' ಸಂಪುಟ 1 ಮತ್ತು 2 ರಾಜ್ಯ ಪತ್ರಾಗಾರ ಇಲಾಖೆಯಿಂದ ಪುಸ್ತಕಗಳು ಪ್ರಕಟವಾಗಿವೆ. ಆದಾಗ್ಯೂ ಕೆಳದಿ ಸಾಮ್ರಾಜ್ಯವನ್ನು ಆಳಿದ ಅರಸ-ಅರಸಿಯರ ಕಾಲದ ಐತಿಹಾಸಿಕ ದಾಖಲೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸಾಮ್ರಾಜ್ಯದ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಕುರಿತಂತೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಥವಾ ಕನ್ನಡ ಪುಸ್ತಕ ಪ್ರಾಧಿಕಾರ ಅಥವಾ ರಾಜ್ಯ ಪತ್ರಾಗಾರ ಇಲಾಖೆಯ ಮೂಲಕ ಪುಸ್ತಕಗಳನ್ನು ಪ್ರಕಟಿಸಿ ಹೊರತರಲು ಪರಿಶೀಲಿಸಲಾಗುವುದು.

ಸಂಖ್ಯೆ:ಕಸಂವಾ 104 ಕವಿಸ 2021

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು